**ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ನ್ಯಾಯಿಕ ದಂಡಾಧಿಕಾರಿಗಳರವರ ನ್ಯಾಯಾಲಯ, ಹೆಗ್ಗಡದೇವನಕೋಟೆ**

# ಸಿ.ಸಿ.ನಂ. 986/2013

| | | | |
|---|---|---|---|
| ಸಾಕ್ಷಿದಾರರ ಹೆಸರು | : | ರಮೇಶ್ ಲಕ್ಷ್ಮಣ ಭಜಂತ್ರಿ | ಪಿ.ಡಬ್ಲ್ಯೂ-1 |
| ತಂದೆಯ ಹೆಸರು | : | ಲಕ್ಷ್ಮಣ್ | ಸಿ.ಡಬ್ಲ್ಯೂ-3 |
| ವಯಸ್ಸು | : | 33 ವರ್ಷ | - |
| ಉದ್ಯೋಗ | : | ಅರಣ್ಯ ರಕ್ಷಕ | ಸಾಕ್ಷಿಗೆ ಪ್ರಮಾಣ ವಚನ ಬೋಧಿಸಿದ ದಿನಾಂಕಃ **22.10.2021.** |
| ವಾಸಸ್ಥಳ | : | ಶಿವಮೊಗ್ಗ | - |

**ಮುಖ್ಯ ವಿಚಾರಣೆಃ ಎಪಿಪಿ ರವರಿಂದಃ**

ನಾನು ಹೆಡಿಯಾಲ ಅರಣ್ಯ ಇಲಾಖೆಯಲ್ಲಿ 2010 ರಿಂದ 2018 ರವೆರೆಗೆ ಅರಣ್ಯ ರಕ್ಷಕನಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ. ದಿಃ 25.08.2012 ರಂದು ಬೆಳಿಗ್ಗೆ 11.00 ಗಂಟೆಯಲ್ಲಿ ನಾನು, ಚಾಸಾ-1,2, 4 ರಿಂದ 7 ರವರು ಹರಳಲ್ಲಿ ಚೈನ್ ಗೇಟಿನಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದೆವು, ಆಗ 1 ರಿಂದ 10 ನೇ ಆರೋಪಿಗಳು ಗುಂಪು ಕಟ್ಟಿಕೊಂಡು ದನಗಳನ್ನು ಕಾಡಿನೊಳಗೆ ಬಿಡಲು ಬಂದಾಗ ನಾವು ತಡೆಯಲು ಪ್ರಯತ್ನಪಟ್ಟಿರುತ್ತೇವೆ. ಆಗ ಆರೋಪಿಗಳು ಅವಾಚ್ಯ ಶಬ್ದಗಳಿಂದ ನಮ್ಮನ್ನು ಬೈದು, ಆರೋಪಿಗಳು ಗೇಟನ್ನು ತಳ್ಳಿದಾಗ ಚಾಸಾ-1 ರವರಿಗೆ ಗೇಟಿನ ರಾಡು ತಗುಲಿ ಕೈಗೆ ರಕ್ತ ಗಾಯವಾಗಿರುತ್ತದೆ. ನನಗೆ ಮತ್ತು ಚಾಸಾ-2 ರವರಿಗೆ ಕೈಗೆ ತರಚಿದ ಗಾಯಗಳಾಗಿರುತ್ತವೆ. ಚಾಸಾ-4 ರಿಂದ 7 ರವರು ಜಗಳ ಬಿಡಿಸಿ ಸಮಾಧಾನ ಮಾಡಿರುತ್ತಾರೆ. ನಾನು, ಚಾಸಾ-1 ಮತ್ತು 2 ರವರು ಆಸ್ಪತ್ರೆಗೆ ದಾಖಲಾಗಿರುತ್ತೇವೆ. ಆರೋಪಿಗಳು ನಮ್ಮ ಕರ್ತವ್ಯಕ್ಕೆ ಅಡ್ಡಿಪಡಿಸಿರುತ್ತಾರೆ. ಚಾಸಾ-1 ರವರು ಸರಗೂರು ಪೊಲೀಸ್ ಠಾಣೆಯಲ್ಲಿ ಆರೋಪಿಗಳ ವಿರುದ್ಧ ದೂರನ್ನು ಸಲ್ಲಿಸಿರುತ್ತಾರೆ. ದೂರನ್ನು ನಿಪಿ-1 ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಆರೋಪಿಗಳ ಪರ ಶ್ರೀ ಟಿ.ಜಿ.ಎಸ್ ವಕೀಲರಿಂದಃ**

ನಾನು ಘಟನೆ ನಡೆದ ದಿನ ಕರ್ತವ್ಯಕ್ಕೆ ಹಾಜರಾಗಿದ್ದ ಬಗ್ಗೆ ಹಾಜರಾತಿ ದೃಢೀಕರಣ ಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ಘಟನೆ ನಡೆದಾಗ ನಾನು, ಚಾಸಾ-1 ಮತ್ತು 2 ರವರು ಇದ್ದೆವು . ಆರೋಪಿಗಳು ಯಾವುದೇ ದನಗಳನ್ನು ಅರಣ್ಯ ಪ್ರದೇಶದೊಳಗೆ ಬಿಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿಗಳು ಗೇಟನ್ನು ತಳ್ಳಿರುವುದಿಲ್ಲ ಮತ್ತು ನಮಗೆ ಯಾವುದೇ ಗಾಯಗಳಾಗಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿಗಳು ನಮ್ಮ ಅರಣ್ಯ ಪ್ರದೇಶದ ಕಾಡಂಚಿನ ಊರಿನಲ್ಲಿ ವಾಸವಾಗಿರುತ್ತಾರೆ ಎಂದರೆ ಸರಿ. ಆರೋಪಿಗಳಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ದೂರನ್ನು ಸಲ್ಲಿಸಿರುತ್ತೇವೆ ಎಂದರೆ ಸರಿಯಲ್ಲ. ಆರೋಪಿಗಳಿಗೂ ಮತ್ತು ನಮಗೂ ಯಾವುದೇ ಗಲಾಟೆ ಆಗಿರುವುದಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ**

**(ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸಾ ಸ ಇ ಒ.,**

Sd/-

**ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,**
**ಹೆಗ್ಗಡದೇವನಕೋಟೆ.**